(*b*) whether the materials are intended to be supplied to them this year ?

A.—Sri K. HANUMANTHAIYA (Chief Minister).—

(*a*) Hoskote Taluk ... 46 persons.
Anekal Taluk ... 194 persons.

(*b*) It will be possible to supply materials to almost all the applicants in the Hoskote taluk and to about 35 in the Anekal taluk. The other cases will be taken up for assistance early in 1954-55.

ಶ್ರೀ ಎಚ್. ಟಿ. ಪುಟ್ಟಪ್ಪ.—ಆನೇಕಲ್ ತಾಲ್ಲೂಕಿನಲ್ಲಿ 194 ಮಂದಿ ಗೋಡೆಗಳನ್ನು ಕಟ್ಟಿಕೊಂಡಿದ್ದು ಅವರು ಕೇಳಿರುವ ಇತರ ಸಾಮಾನುಗಳಿಗೆ ಹಣವನ್ನು ಪೆಚ್ಚಮಾಡದೇ ಇರಲು ಕಾರಣವೇನು ?

ಶ್ರೀ ಕೆ. ಹನುಮಂತಯ್ಯ.—ಖರ್ಚಾಗಿಲ್ಲವೆಂದು ತಿಳಿಸಿಲ್ಲ. ಹೊಸಕೋಟೆ ತಾಲ್ಲೂಕಿಗೆ ಕೊಟ್ಟಿರುವ 12 ಸಾವಿರ ರೂಪಾಯಿಗಳಲ್ಲಿ ಜನವರಿ ಒಂದನೆಯ ತಾರೀಖಿನವರೆಗೆ 11,386 ರೂಪಾಯಿಗಳು ಖರ್ಚಾಗಿವೆ. ಆನೇಕಲ್ ತಾಲ್ಲೂಕಿಗೆ ಕೊಟ್ಟಿರುವ 10 ಸಾವಿರ ರೂಪಾಯಿಗಳಲ್ಲಿ 3,752 ರೂಪಾಯಿಗಳು ಖರ್ಚಾಗಿವೆ. ಇದು ಎರಡು ತಿಂಗಳ ಹಿಂದೆ ಖರ್ಚಾದುದು. ಈಗ ಇನ್ನೂ ಹೆಚ್ಚು ಖರ್ಚಾಗಿದೆ.

ಶ್ರೀ ಸಿ. ಟಿ. ಹನುಮಂತಯ್ಯ.—ಆನೇಕಲ್ ತಾಲ್ಲೂಕಿನವರಿಗೆ ಬೇಕಾಗಿರುವ ಸಾಮಗ್ರಿಗಳನ್ನು ಒಟ್ಟಿಗೆ ಒದಗಿಸಿಕೊಡುತ್ತೀರಾ ?

ಶ್ರೀ ಕೆ. ಹನುಮಂತಯ್ಯ.—ಎಲ್ಲಾ ಒಂದೇಸಾರಿ ಒದಗಿಸಬೇಕೆಂದರೆ ಕಷ್ಟಸಾಧ್ಯವಾದ ಕೆಲಸ.

ಶ್ರೀ ಎಸ್. ಸಿದ್ದಪ್ಪ.—ಈ ಬಗ್ಗೆ ಸಂಸ್ಥಾನಾ ಮಳೆ ಎಲ್ಲಾ ಕಡೆಗೂ ಒಂದೇ ವಿಧವಾಗಿ ಹಂಚಿಕೆಮಾಡಲು ಸಾಧ್ಯವಿಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಈ ಹಂಚಿಕೆ ವ್ಯವಸ್ಥೆ ಆಯಾ ಪ್ರದೇಶದ ಅವಶ್ಯಕತೆಯನ್ನು ಅನುಸರಿಸಿರುತ್ತದೆ.

---

1 P.M.

Government Officers drawing Salary of Rs. 200 and above in the State.

Q.—951. Sri G. A. THIMMAPPA GOWDA (Arkalgud).—

Will the Government be pleased to state :—

(*a*) the total number of officers, of officials of all Government Departments who are drawing the salary of Rupees two hundred and above in the State ;

(*b*) of them, how many belong to Bangalore City and how many to other Districts (separate figures for Bangalore City and every District may kindly be furnished) ?

A.—Sri K. HANUMANTHAIYA (Chief Minister).—

(*a*) 1,981.

(*b*)

Bangalore City	...	538
Bangalore District	...	193
Mysore District	...	256
Shimoga District	...	106
Tumkur District	...	109
Kolar District	...	99
Chitaldrug District	...	59
Chikmagalur District.		57
Mandya District	...	89
Hassan District	...	66
Bellary District	...	56
Outside the State	...	37
Number for which details are not readily available	...	316
Total		1981

ಶ್ರೀ ಜಿ. ಎ. ತಿಮ್ಮಪ್ಪಗೌಡ.—200 ರೂಪಾಯಿ ಮತ್ತು ಅದಕ್ಕೆ ಮೇಲ್ಪಟ್ಟು ಸಂಬಳ ಪಡೆಯುತ್ತಿರುವ ಆಫೀಸರುಗಳು ಮತ್ತು ನೌಕರರುಗಳು ಸಂಸ್ಥಾನಾ ಮಳೆ ಎಷ್ಟು ಜನ ಇದ್ದಾರೆ ಎಂಬ ಅಂಕಿ ಅಂಶ ಕೊಟ್ಟಿದ್ದೀರಿ. ಈ ಪೈಕಿ ಸಾಕಾದಷ್ಟು ಪ್ರಾತಿನಿಧ್ಯ ಇಲ್ಲದೆ ಹಿಂದುಳಿದಿರತಕ್ಕ ಪ್ರದೇಶಗಳು ಎಂದರೆ ಹಾಸನ, ಚಿಕ್ಕಮಗಳೂರು ವಗೈರೆ ಜಿಲ್ಲೆಗಳಿಗೆ ಮುಂದಾದರೂ ಸರ್ಕಾರದವರು ಹೆಚ್ಚಿನರೀತಿಯಲ್ಲಿ ಪ್ರಾತಿನಿಧ್ಯ ಕೊಡುವುದಕ್ಕೆ ಪ್ರಯತ್ನಮಾಡುತ್ತೀರಾ ? ಆರೀತಿ ಆಗುವಂತೆ ನೋಡಿಕೊಳ್ಳುತ್ತೀರಾ ?

ಶ್ರೀ ಕೆ. ಹನುಮಂತಯ್ಯ.—ಹಾಗೆ ನೋಡಿಕೊಳ್ಳುವುದಕ್ಕೆ ಆಗುವುದಿಲ್ಲ, ಏಕೆಂದರೆ ಟೆರಿಟೋರಿಯಲ್ ಬೇಸಿಸ್‌ಮೇಲೆ ರೆಕ್ರೂಟ್‌ಮೆಂಟ್ ಮಾಡುವುದಿಲ್ಲ. It is not possible under the Constitution to base recruitment on territorial considerations.

ಶ್ರೀ ಜಿ. ಎ ತಿಮ್ಮಪ್ಪಗೌಡ.—ರೀಜನಲ್ ಬೇಸಿಸ್ ಮೇಲೆ ಹಿಂದುಳಿದ ಪ್ರದೇಶ ಎಂದು ಹೇಳಿ ಸಾಕಾದಷ್ಟು ಉತ್ತೇಜನ ಕೊಡುವುದೂ ಒಂದು ಮಾರ್ಗ ಎಂದು ಸರ್ಕಾರ ಪರಿಗಣಿಸುವುದಿಲ್ಲವೇ ?

Mr. SPEAKER.—How does it arise ? The question is altogether different.

ಶ್ರೀ ಪಿ. ಆರ್. ರಾಮಯ್ಯ.—ಬೆಂಗಳೂರು ಸಿಟಿಯೊಳಗೆ 538 ಮಂದಿ ಎಂದು ಹೇಳಿದ್ದೀರಿ. ಇವರೆಲ್ಲರೂ ಬೆಂಗಳೂರು ಸಿಟಿಯಲ್ಲಿ ಇದ್ದವರೇ ಅಥವಾ ಬಾಕಿ ಕಡೆಯವರೂ ಇದ್ದಾರೆಯೇ ?

ಶ್ರೀ ಕೆ. ಹನುಮಂತಯ್ಯ.—ಇವರೆಲ್ಲರೂ ಬೆಂಗಳೂರು ಸಿಟಿಯಲ್ಲಿ ಇದ್ದರೂಕೂಡ ಅನೇಕರು ಬೆಂಗಳೂರು ಸಿಟಿಗೆ ಹೊರಗಡೆಯಿಂದ ಬಂದಿರುವವರೂ ಇದ್ದಾರೆ.

ಶ್ರೀ ಜಿ. ಪುಟ್ಟಸ್ವಾಮಿ.—ವಿವರಗಳು ಸಿದ್ಧವಾಗಿ ದೊರೆಯದೇ ಇರುವವರ ಸಂಖ್ಯೆ 316 ಎಂದು ಹೇಳಿದ್ದೀರಿ. ಇವರು ಎಲ್ಲಿರುವವರು ಎಂಬುದು ತಿಳಿಯದೇ ?

ಶ್ರೀ ಕೆ. ಹನುಮಂತಯ್ಯ.—ತಿಳಿಯದು.

ಶ್ರೀ ಜಿ. ಪುಟ್ಟಸ್ವಾಮಿ.—ಜಿಲ್ಲಾವಾರು ನರಿ ಸಮಾನವಾಗಿ ಅವಕಾಶಕೊಡದೇ ಇರುವುದು ಪ್ರಜಾ ಪ್ರಭುತ್ವ ತತ್ವಕ್ಕನುಗುಣವಾಗಿಲ್ಲವಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಪ್ರಜಾ ಪ್ರಭುತ್ವಕ್ಕೂ ಇದಕ್ಕೂ ಸಂಬಂಧವೇ ಇಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಸಮಾನ ಅವಕಾಶ ಏಕೆ ಕೊಡಬಾರದು, ಸ್ವಾಮಿ ?

ಶ್ರೀ ಕೆ. ಹನುಮಂತಯ್ಯ.—ಎಲ್ಲಾ ವಿಚಾರದಲ್ಲೂ ಸಮಾನತೆ ದೇವರು ಕೊಟ್ಟಿಲ್ಲ !

ಶ್ರೀ ಬಿ. ಎಕ್. ಬೋರಣ್ಣಗೌಡ.—ಬೆಂಗಳೂರು ಸಿಟಿಯಲ್ಲಿ ಇರುವವರ ಪೈಕಿ ಅನೇಕರು ಹೊರಗಡೆಯಿಂದ ಬಂದಿರುವವರೂ ಇದ್ದಾರೆ ಎಂದು ಹೇಳಿದರು. ಇವರೆಲ್ಲರೂ ಇಲ್ಲೇ ಮನೆಗಳನ್ನು ಕಟ್ಟಿಕೊಂಡು ಇಲ್ಲೇ ವಾಸವಾಗಿದ್ದು ಕೆಲಸಕ್ಕೆ ನೇಮಕವಾಗಿರುವವರಲ್ಲವೆ ?

Mr. SPEAKER.—That does not arise. Any other question ?

ಶ್ರೀ ಬಿ. ಎಕ್. ಬೋರಣ್ಣಗೌಡ.—ಇವರೆಲ್ಲರೂ ಬೆಂಗಳೂರು ಸಿಟಿಯಲ್ಲೇ ವಾಸವಾಗಿದ್ದು ನೇಮಕ ಮಾಡಲ್ಪಟ್ಟಿರುವವರಲ್ಲವೆ ?

ಶ್ರೀ ಕೆ. ಹನುಮಂತಯ್ಯ.—ಹಾಗೆ ಹೇಳುವುದಕ್ಕಾಗುವುದಿಲ್ಲ. ತಮಗೆ ಗೊತ್ತಿರುವ ಹಾಗೆ ಮೊದಲು ರಿಕ್ರೂಟ್‌ಮೆಂಟ್ ಬೋರ್ಡ್ ಇತ್ತು. ಅನಂತರ ಪಬ್ಲಿಕ್ ಸರ್ವಿಸ್ ಕಮಿಷನ್‌ನವರು appointment ಮಾಡಿದ್ದಾರೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಕೆಲವರು competitive examination ಮೂಲಕ ನೇಮಕ ಮಾಡಲ್ಪಟ್ಟವರು ಇದ್ದಾರೆ; ಆದರೂ recommendation ಮೂಲಕ appoint ಆದವರೇ ಹೆಚ್ಚು ಮಂದಿ ಅಲ್ಲವೇ ?

ಶ್ರೀ ಕೆ. ಹನುಮಂತಯ್ಯ.—Recommendation ಮೇಲೆ ನೇಮಕ ಮಾಡಿದ್ದಾರೆ ಎಂದು ಹೇಳುವುದನ್ನು ಒಪ್ಪುವುದಿಲ್ಲ.

ಶ್ರೀ ಡಿ. ವೆಂಕಟೇಶ್.—ಇಲ್ಲಿರತಕ್ಕ 9-10 ಜಿಲ್ಲೆಗಳಿಗೆ ಆಫೀಸರುಗಳು ಮತ್ತು ನೌಕರರು 200 ರೂಪಾಯಿಗಳಿಗೆ ಮೇಲಟ್ಟು ಪಡೆಯತಕ್ಕವರು 1,981 ಜನ ಇರುವುದು ಬಹಳ ಜಾಸ್ತಿ ಅಲ್ಲವೇ, ಸ್ವಾಮಿ ?

Sri K. HANUMANTHAIYA.—It is a matter of opinion.

Clearance of Slums in Bangalore.

Q.—873. Sri R. ANANTARAMAN (Chamarajpet).—

Will the Government be pleased to state :—

(*a*) whether any scheme is drafted by the City Improvement Trust Board to remove slum areas of the Corporation of the City of Bangalore ;

(*b*) the details of the scheme ;

(*c*) the progress of the scheme ;

(*d*) the funds provided by the Board to work up the scheme during 1953-54 ?

A.—Sri T. CHANNIAH (Minister for Public Health and Local Self-Government).—

(*a*) Yes.

(*b*) to (*d*) Statement appended below.

Name of the Slum Improvement Scheme	Details and Progress of the Scheme	Amount provided during 1953-54
		Rs.
1 Improvement to the Slum Area in Kodandaramapuram.	The Scheme is estimated to cost Rs. 1,61,000—Forming roads and laying underground drains are completed in the area where there are no sheds. Action is being taken to allot sites to the slum dwellers through Kondandaramapuram Society.	1,25,000
2 Anjanappa Gardens...	The cost of the scheme amounts to Rs. 1,46,000—Forming roads and laying underground drains are in progress. Sites are being formed for allotment to the slum dwellers in this area.	1,26,120